ಋ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ದಿನಾಂಕ 27.4.1993ರಂದು ಗುತ್ತಿಗೆದಾರರಿಗೆ ಕೆಲಸ ಆದೇಶವನ್ನು ನೀಡಲಾಗಿದೆ.

ಆ) ರೂ. 40.93 ಕೋಟಿಗಳು.

ಇ) ಮೆ. ಈಸ್ಟ್ ಕೋಸ್ಟ್ ಕನ್‌ಸ್ಟ್ರಕ್ಷನ್ ಇಂಡಿಯಾ ಲಿಮಿಟೆಡ್ - ಚೆನ್ನೈ

ಈ) ಕರಾರಿನಂತೆ ದಿನಾಂಕ 26.8.2000ದಂದು ಪೂರ್ಣಗೊಳ್ಳಬೇಕಾಗಿತ್ತು.

ಉ) ರೂ. 12.36 ಕೋಟಿಗಳು.

ಊ) 1. ಗುತ್ತಿಗೆದಾರರಿಗೆ ಕಾಮಗಾರಿ ಪ್ರದೇಶವನ್ನು ವರ್ಗಾಯಿಸುವುದು.

2. ರಸ್ತೆಯಲ್ಲಿ ಹಾಲೆ ಇರುವ ವಿದ್ಯುತ್ ಮತ್ತು ಟೆಲಿಫೋನ್, ಕೇಬಲ್ ಮತ್ತು ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆಗಳನ್ನು ಸ್ಥಳಾಂತರಿಸುವುದು.

3. ವಾಹನ ಸಂಚಾರವನ್ನು ಇತರೆ ರಸ್ತೆಗಳಿಗೆ ವರ್ಗಾಯಿಸುವಲ್ಲಿ ವಿಳಂಬವಾಗಿರುವುದರಿಂದ ಈ ಮೇಲು ಸೇತುವೆ ಯೋಜನೆ ಪೂರ್ಣಗೊಳಿಸುವಲ್ಲಿ ವಿಳಂಬವಾಗುತ್ತಿದೆ.

ಋ) ದಿನಾಂಕ31.12.2000

**ರಾಜ್ಯ ಕಾರಾಗೃಹಗಳಿಂದ ಖೈದಿಗಳು ಪರಾರಿಯಾಗಿರುವ ಪ್ರಕರಣಗಳು**

5103 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಕಾರಾಗೃಹಗಳ ಸಂಖ್ಯೆ ಎಷ್ಟು?

ಆ) ಈ ಕಾರಾಗೃಹಗಳಲ್ಲಿರುವ ಒಟ್ಟು ಖೈದಿಗಳ ಸಂಖ್ಯೆ ಎಷ್ಟು?

ಇ) ಈ ಕಾರಾಗೃಹಗಳಿಂದ ಇಲ್ಲಿಯವರೆಗೆ ಖೈದಿಗಳು ಪರಾರಿಯಾಗಿರುವ ಪ್ರಕರಣಗಳೆಷ್ಟು? (ಕಾರಾಗೃಹವಾರು ವಿವರ ನೀಡುವುದು)

ಈ) ಖೈದಿಗಳು ಪರಾರಿಯಾಗಲು ಕಾರಣಗಳೇನು?

ಉ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 90 ಕಾರಾಗೃಹಗಳಿರುತ್ತವೆ.

ಆ) ದಿನಾಂಕ 31.10.2000ರಲ್ಲಿದ್ದಂತೆ ವಿವಿಧ ಕಾರಾಗೃಹಗಳಲ್ಲಿ 9130 ಪುರುಷ ಖೈದಿಗಳು ಹಾಗೂ 273 ಮಹಿಳಾ ಖೈದಿಗಳು ಒಟ್ಟು 9403 ಖೈದಿಗಳು ಇರುತ್ತಾರೆ.

ಇ) ರಾಜ್ಯದ ಕಾರಾಗೃಹಗಳಿಂದ ಪರಾರಿಯಾದ ಪ್ರಕರಣಗಳ ವಿವರ ಈ ಕೆಳಗಿನಂತಿರುತ್ತದೆ

| ವರ್ಷ | ಒಟ್ಟು ಪರಾರಿಯಾದವರ ಸಂಖ್ಯೆ | ಒಟ್ಟು ದಾಖಲಾದ ಪ್ರಕರಣಗಳು |
|---|---|---|
| 1998 | 22 | 14 |
| 1999 | 40 | 27 |
| 2000 (31.10.2000 ರವರೆಗೆ) | 31 | 18 |

ಕಾರಾಗೃಹವಾರು ವಿವರಗಳ ಪಟ್ಟಿಯನ್ನು ಲಗತ್ತಿಸಿದೆ.

ಈ) ಖೈದಿಗಳು ಜೈಲಿನಿಂದ ಪರಾರಿಯಾಗಲು ಮೂಲ ಭೂತವಾಗಿ ಕಾವಲು ಸಿಬ್ಬಂದಿಯವರ ಅಜಾಗರೂಕತೆ, ನಿರ್ಲಕ್ಷತೆ, ಶಿಥಿಲಗೊಂಡ ಜೈಲು ಕಟ್ಟಡಗಳು ಹಾಗೂ ಸಿಬ್ಬಂದಿಗಳ ತೀವ್ರ ಕೊರತೆ ಪ್ರಮುಖವಾದ ಕಾರಣಗಳು.

ಉ) ಕರ್ತವ್ಯದಲ್ಲಿ ಅಜಾಗರೂಕತೆ ಮತ್ತು ನಿರ್ಲಕ್ಷತೆ ತೋರಿದ ಸಿಬ್ಬಂದಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುತ್ತಿದೆ. ಎಲ್ಲಾ ಜೈಲುಗಳನ್ನು ಆಧುನೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

**ಕಾರಾಗೃಹವಾರು ವಿವರಣೆ ಪಟ್ಟಿ**

| ಕಾರಾಗೃಹಗಳು | 1998 | | 1999 | | 31.10.2000ವರೆಗೆ | | ಒಟ್ಟು |
|---|---|---|---|---|---|---|---|
| | ವಿಚಾರಣಾ ಬಂದಿ | ಸಜಾ ಬಂದಿ | ವಿಚಾರಣಾ ಬಂದಿ | ಸಜಾ ಬಂದಿ | ವಿಚಾರಣಾ ಬಂದಿ | ಸಜಾ ಬಂದಿ | |
| **ಕೇಂದ್ರ ಕಾರಾಗೃಹ** | | | | | | | |
| ಬೆಂಗಳೂರು | 01 | 01 | 04 | - | 02 | - | 08 |
| ಬೆಳಗಾಂ | - | - | -2 | - | - | - | 02 |
| ಬಳ್ಳಾರಿ | 01 | - | 02 | 01 | 01 | - | 05 |
| ಗುಲ್ಬರ್ಗಾ | 01 | - | - | - | - | - | 01 |
| ಮೈಸೂರು | 01 | - | 02 | - | 02 | 01 | 06 |
| **ಜಿಲ್ಲಾ ಕಾರಾಗೃಹ** | | | | | | | |
| ಕಾರವಾರ | 02 | - | - | - | 01 | - | 03 |
| ಮಂಗಳೂರು | 05 | 01 | 03 | - | - | - | 09 |

| ಕಾರಾಗೃಹಗಳು | 1998 | | 1999 | | 31.10.2000ವರೆಗೆ | | ಒಟ್ಟು |
|---|---|---|---|---|---|---|---|
| | ವಿಚಾರಣಾ ಬಂದಿ | ಸಜಾ ಬಂದಿ | ವಿಚಾರಣಾ ಬಂದಿ | ಸಜಾ ಬಂದಿ | ವಿಚಾರಣಾ ಬಂದಿ | ಸಜಾ ಬಂದಿ | |
| ರಾಯಚೂರು | - | - | - | - | 01 | - | 01 |
| ಶಿವಮೊಗ್ಗ | 01 | - | - | - | 08 | - | 09 |
| **ಜಿಲ್ಲಾ ಉಪ ಕಾರಾಗೃಹ** | | | | | | | |
| ಚಿಕ್ಕಮಗಳೂರು | 01 | - | 01 | - | - | - | 02 |
| ಚಿತ್ರದುರ್ಗ | - | - | - | - | 01 | - | 01 |
| ಧಾರವಾಡ | 01 | - | 03 | - | 01 | - | 05 |
| ಹಾಸನ | - | - | 01 | - | 06 | 01 | 08 |
| ಕೋಲಾರ | - | - | 02 | - | - | - | 02 |
| ತುಮಕೂರು | - | - | 02 | - | - | - | 02 |
| **ವಿಶೇಷ ಉಪ ಕಾರಾಗೃಹ** | | | | | | | |
| ದಾವಣಗೆರೆ | - | - | 06 | - | - | - | 06 |
| ಕೆ.ಜಿ.ಎಫ್ | 02 | - | - | - | - | - | 02 |
| **ತರುಣ ಬಂದೀಖಾನೆ** | | | | | | | |
| ಧಾರವಾಡ | - | 01 | 01 | - | - | - | 02 |
| **ತಾಲ್ಲೂರು ಉಪ ಕಾರಾಗೃಹ** | | | | | | | |
| ಆಳಂದ | - | - | - | - | 01 | - | 01 |
| ಬಾಗಲಕೋಟೆ | - | - | 01 | - | - | - | 01 |
| ದೇವದುರ್ಗ | - | - | 01 | - | - | - | 01 |
| ಗಂಗಾವತಿ | 01 | - | 01 | - | 01 | - | 02 |
| ಹೊಸಪೇಟೆ | - | - | 01 | - | - | - | 01 |
| ಜಮಖಂಡಿ | 01 | - | - | - | - | - | 01 |
| ಲಿಂಗಸುಗೂರು | - | - | 06 | - | - | - | 06 |
| ಸಾಗರ | - | - | 01 | - | - | - | 01 |

| ಕಾರಾಗೃಹಗಳು | 1998 | | 1999 | | 31.10.2000ವರೆಗೆ | | ಒಟ್ಟು |
|---|---|---|---|---|---|---|---|
| | ವಿಚಾರಣಾ ಬಂದಿ | ಸಜಾ ಬಂದಿ | ವಿಚಾರಣಾ ಬಂದಿ | ಸಜಾ ಬಂದಿ | ವಿಚಾರಣಾ ಬಂದಿ | ಸಜಾ ಬಂದಿ | |
| ಶೋರಾಪುರ | - | - | - | - | 01 | - | 01 |
| ತಿಪಟೂರು | - | - | - | - | 01 | - | 01 |
| ವಿರಾಜಪೇಟೆ | 03 | - | - | - | - | - | 03 |
| ಹಳಿಯಾಳ | - | - | - | - | 04 | - | 04 |
| ರಾಮದುರ್ಗ | - | - | - | - | 01 | - | 01 |
| ಅಂಕೋಲಾ | 01 | - | - | - | - | - | 01 |
| | **22** | **3** | **40** | **01** | **31** | **02** | **99** |

**ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ವಿಮಾನ ನಿಲ್ದಾಣ ಸ್ಥಾಪನೆ**

5104 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ನಾಗರೀಕ ವಿಮಾನ ಯಾನ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಯಾವ ಯಾವ ಜಿಲ್ಲಾ ಕೇಂದ್ರಗಳಲ್ಲಿ ವಿಮಾನ ನಿಲ್ದಾಣ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆ?*

ಆ) *ಹಾಗಿದ್ದಲ್ಲಿ ಇದಕ್ಕಾಗಿ ಸರ್ಕಾರ ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು?*

ಇ) *ಈ ಉದ್ದೇಶಿತ ವಿಮಾನ ನಿಲ್ದಾಣಗಳನ್ನು ನಿರ್ಮಿಸಲು ಖಾಸಗಿಯವರಿಗೆ ಗುತ್ತಿಗೆ ನೀಡಲಾಗುವುದೇ?*

ಶ್ರೀ ಟಿ. ಜಾನ್ (ನಾಗರೀಕ ವಿಮಾನ ಯಾನ ಮತ್ತು ಮೂಲಕ ಸೌಲಭ್ಯ ಅಭಿವೃದ್ಧಿ ರಾಜ್ಯ ಸಚಿವರು) :

ಅ) ಜಿಲ್ಲಾ ಕೇಂದ್ರಗಳಲ್ಲಿ ವಿಮಾನ ನಿಲ್ದಾಣ ಸ್ಥಾಪಿಸುವ ಯಾವುದೇ ಪ್ರಸ್ತಾವನೆಗಳು ಸರ್ಕಾರದ ಮುಂದೆ ಇರುವುದಿಲ್ಲ. ಹಾಲಿ ಅಸ್ತಿತ್ವದಲ್ಲಿ ಇರುವ ಅಂದರೆ, ಕಾರ್ಯಾಚರಣೆ ಇಲ್ಲದೇ ಇರುವ ಮೈಸೂರು, ಹುಬ್ಬಳ್ಳಿ, ಗುಲ್ಬರ್ಗಾ ಹಾಗೂ ಬಳ್ಳಾರಿ ವಿಮಾನ ನಿಲ್ದಾಣಗಳನ್ನು ಖಾಸಗಿ ಸಂಸ್ಥೆಗಳು ಭಾಗವಹಿಸುವಿಕೆ ಹಾಗೂ ಬಂಡವಾಳ ಹೂಡಿಕೆ ಮೂಲಕ ಅಭಿವೃದ್ಧಿ ಪಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ಇತ್ತೀಚೆಗೆ ನಡೆದ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ಸಂಸ್ಥೆಯು ಮೈಸೂರು, ಹುಬ್ಬಳ್ಳಿ, ಬಳ್ಳಾರಿ ಮತ್ತು ಗುಲ್ಬರ್ಗಾ ವಿಮಾನ ನಿಲ್ದಾಣಗಳನ್ನು ಖಾಸಗಿ ಸಂಸ್ಥೆಗಳ ಭಾಗವಹಿಸುವಿಕೆ ಹಾಗೂ ಬಂಡವಾಳ ಹೂಡಿಕೆಯಿಂದ ಅಭಿವೃದ್ಧಿಪಡಿಸುವ ಬಗ್ಗೆ ಆಸಕ್ತಿ ವಹಿಸಲು ಆಹ್ವಾನಿಸಿತ್ತು.